ಒಟ್ಟು ಪ್ರಶ್ನೆಗಳ ಸಂಖ್ಯೆ : 26 ] [ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8
Total No. of Questions : 26 ] [ Total No. of Printed Pages : 8

**ಸಂಕೇತ ಸಂಖ್ಯೆ : 102-EK (NS)**
**Code No. : 102-EK (NS)**

# ಡಿ.ಇಡಿ. ಪ್ರಥಮ ವರ್ಷ
# D.Ed. FIRST YEAR
## ಶಿಕ್ಷಣ
## EDUCATION
# ಮೂಲ ಪರಿಕಲ್ಪನೆಗಳ ಪರಿಚಯ
# INTRODUCTION TO BASIC CONCEPTS

(ಕನ್ನಡ ಮತ್ತು ಇಂಗ್ಲಿಷ್ ಭಾಷಾಂತರ)
( Kannada & English Versions )
**(ಹೊಸ ಪಠ್ಯವಸ್ತು)**
**(New Syllabus)**

ದಿನಾಂಕ : 13. 12. 2018 ]
Date : 13. 12. 2018 ]
ಸಮಯ : ಬೆಳಿಗ್ಗೆ 10.00 ರಿಂದ ಮಧ್ಯಾಹ್ನ 1.00 ರವರೆಗೆ ] [ ಗರಿಷ್ಠ ಅಂಕಗಳು : 60
Time : 10.00 A.M. to 1.00 P.M. ] [ Max. Marks : 60

*ಅಭ್ಯರ್ಥಿಯ ನೋಂದಣಿ ಸಂಖ್ಯೆ*
*Register Number of the Candidate*

(ಕನ್ನಡ ಭಾಷಾಂತರ)
(Kannada Version)

**ಭಾಗ – I**

ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಸೂಕ್ತವಾದ ಒಂದು ಆಯ್ಕೆಯನ್ನು ಆರಿಸಿ ಬರೆಯಿರಿ. ಪ್ರತಿ ಪ್ರಶ್ನೆಗೆ ಒಂದು ಅಂಕ ನೀಡಲಾಗಿದೆ. ಪ್ರತಿ ಪ್ರಶ್ನೆಯೂ ಕಡ್ಡಾಯ : $10 \times 1 = 10$

1. "ಶಿಕ್ಷಣವೆಂದರೆ ಅನುಭವಗಳ ನಿರಂತರ ಪುನರ್ ನಿರ್ಮಾಣ (ಪುನರ್‌ರಚನೆ) ಪ್ರಕ್ರಿಯೆಗಳ ಹಾದಿಯಲ್ಲಿ ಸಾಗುವುದು" ಎಂದು ತಿಳಿಸಿದವರು.
   (A) ಮಹಾತ್ಮ ಗಾಂಧೀಜಿ (B) ಸ್ವಾಮಿ ವಿವೇಕಾನಂದರು
   (C) ಜಾನ್ ಡ್ಯೂಯಿ (D) ಆರ್.ಎಸ್. ಪೀಟರ್ಸ್

2. "ಪ್ರತಿ ಮಗುವು ಸಹ ವಿಭಿನ್ನ" ಎಂಬುದರ ಪರಿಕಲ್ಪನೆ ಇದಾಗಿದೆ
   (A) ಅನ್ಯ (B) ಅಗಣ್ಯ
   (C) ಅನ್ಯೋನ್ಯ (D) ಅನನ್ಯ

3. ವ್ಯಕ್ತಿಯನ್ನು ಸಾಮಾಜೀಕರಣಗೊಳಿಸುವುದು ಎಂದರೆ
   (A) ಸಾಮಾಜಿಕ ಪರಿವರ್ತನೆ ಉಂಟುಮಾಡುವುದು
   (B) ಪಠ್ಯಕ್ರಮದಲ್ಲಿ ಸಾಮಾಜೀಕರಣಗೊಳಿಸುವ ಅಂಶಗಳನ್ನು ಸೇರಿಸುವುದು
   (C) ಸಮಾಜದಲ್ಲಿನ ಆಚರಣೆಗಳು, ರೀತಿ ನೀತಿಗಳು, ಸಂಪ್ರದಾಯಗಳನ್ನು ವೀಕ್ಷಿಸುವುದು
   (D) ಜೈವಿಕ ಜೀವಿಯನ್ನು ಸಾಮಾಜಿಕ ವ್ಯಕ್ತಿಯನ್ನಾಗಿ ಬದಲಾಯಿಸುವುದು

4. 'ವಯಸ್ಕರ ಹೊಸ್ತಿಲು' ಎಂಬುದು ಮಾನವ ಜೀವಿತಾವಧಿಯ ಈ ಹಂತದ ಗುಣಲಕ್ಷಣವಾಗಿದೆ.

(A) ಶೈಶವಾವಸ್ಥೆ (B) ಬಾಲ್ಯಾವಸ್ಥೆ

(C) ತಾರುಣ್ಯಾವಸ್ಥೆ (D) ವಯಸ್ಕರು

5. 'ಕಲಿಕೆ' ಉಂಟಾಗುವುದು

I. ಆಲಿಸುವುದರಿಂದ

II. ವೀಕ್ಷಿಸುವುದರಿಂದ

III. ಓದು ಮತ್ತು ಬರೆಯುವುದರಿಂದ

IV. ಸ್ಪರ್ಶದ ಮೂಲಕ

(A) I ಮತ್ತು II (B) III ಮತ್ತು IV

(C) I, II ಮತ್ತು III (D) I, II, III ಮತ್ತು IV

6. ವಿಮರ್ಶಾತ್ಮಕ ಬುದ್ಧಿವಂತಿಕೆಯ ಗುಣಲಕ್ಷಣಗಳಲ್ಲಿ ಈ ಕೆಳಗಿನ ಒಂದು ಗುಣಲಕ್ಷಣ ಸಮಂಜಸ ಆಗಿರುವುದಿಲ್ಲ.

(A) ಸಂದರ್ಭಗಳಿಗೆ ಹೊಂದಿಕೊಳ್ಳುವುದು

(B) ಅಮೂರ್ತವಾಗಿ ಚಿಂತನೆ ನಡೆಸುವುದು

(C) ಮಾಹಿತಿಯನ್ನು ಸಂಸ್ಕರಿಸುವುದು

(D) ಭಾಷಾ ಸಾಮರ್ಥ್ಯ ಹೊಂದಿರುವುದು

7. "ಶಿಕ್ಷಕರು ತರಗತಿ ಪ್ರವೇಶಿಸುವ ಮೊದಲು ಬಾಗಿಲಲ್ಲೇ ಮಾತನಾಡಲು ಪ್ರಾರಂಭಿಸಿ ಅನಂತರ ಒಳಗೆ ಬರುತ್ತಾರೆ." ಶಿಕ್ಷಕರ ಉದ್ದೇಶವು ಈ ಕೆಳಗಿನ ನ್ಯೂನ್ಯತೆಯುಳ್ಳ ಮಕ್ಕಳಿಗೆ ಅನುಕೂಲಿಸುವುದಾಗಿದೆ.

(A) ಶ್ರವಣದೋಷ (B) ದೃಷ್ಟಿದೋಷ

(C) ವಾಕ್‌ದೋಷ (D) ಡಿಸ್ಲೆಕ್ಸಿಯಾ

8. "ಶಿಕ್ಷಣವು ಸಮವರ್ತಿಪಟ್ಟಿಯಲ್ಲಿದೆ" ಎಂದರೆ

(A) ಶಿಕ್ಷಣವು ಸ್ಥಳೀಯ ಸರ್ಕಾರದ ಶಾಸನಕ್ಕೆ ಒಳಪಟ್ಟಿದೆ

(B) ಶಿಕ್ಷಣವು ರಾಜ್ಯ ಸರ್ಕಾರದ ಶಾಸನಕ್ಕೆ ಒಳಪಟ್ಟಿದೆ

(C) ಶಿಕ್ಷಣವು ಕೇಂದ್ರ ಸರ್ಕಾರದ ಶಾಸನಕ್ಕೆ ಒಳಪಟ್ಟಿದೆ

(D) ಶಿಕ್ಷಣವು ಕೇಂದ್ರ ಹಾಗೂ ರಾಜ್ಯ ಸರ್ಕಾರದ ಶಾಸನಕ್ಕೆ ಒಳಪಟ್ಟಿದೆ

9. ದೈನಂದಿನ ತರಗತಿಯ ಬೋಧನಾ–ಕಲಿಕೆ ಪ್ರಕ್ರಿಯೆಯಲ್ಲಿ ಶಿಕ್ಷಕರು ಬಳಸುವ ಮೌಲ್ಯಾಂಕನ ಪರೀಕ್ಷೆ ಇದಾಗಿದೆ

(A) ಸಾಧನಾ ಪರೀಕ್ಷೆ (B) ರೂಪಣಾತ್ಮಕ ಮೌಲ್ಯಾಂಕನ ಪರೀಕ್ಷೆ

(C) ಸಂಕಲನಾತ್ಮಕ ಮೌಲ್ಯಂಕನ ಪರೀಕ್ಷೆ (D) ನೈದಾನಿಕ ಪರೀಕ್ಷೆ

10. ರಾಷ್ಟ್ರೀಯ ಶಿಕ್ಷಣ ನೀತಿ 1986 ಹಾಗೂ 1992 ರ ಪರಿಷ್ಕೃತ ನೀತಿಯ ಪ್ರಕಾರ ಪ್ರಾಥಮಿಕ ಶಿಕ್ಷಣದಲ್ಲಿ ಪ್ರಾಮುಖ್ಯತೆ ನೀಡಲಾದ ವಲಯಗಳು

I. 6 ರಿಂದ 14 ವರ್ಷದೊಳಗಿನ ಎಲ್ಲಾ ಮಕ್ಕಳ ಸಾರ್ವತ್ರಿಕ ದಾಖಲಾತಿ

II. ದಾಖಲಾದ ಎಲ್ಲಾ ಮಕ್ಕಳನ್ನು ಶಾಲೆಯಲ್ಲಿಯೇ ಉಳಿಸಿಕೊಳ್ಳುವುದು

III. ಶಾಲೆಯಲ್ಲಿ ಯೋಗ ಶಿಕ್ಷಣ ನೀಡುವುದು

IV. ಎಲ್ಲಾ ಮಕ್ಕಳಿಗೂ ಸಾಧಿಸಲೇಬೇಕಾದ ಕಲಿಕಾ ಮಟ್ಟವನ್ನು ತಲುಪಲು, ಗುಣಮಟ್ಟದ ಶಿಕ್ಷಣವನ್ನು ಅಭಿವೃದ್ಧಿಗೊಳಿಸುವುದು

(A) I, II ಮತ್ತು IV (B) I, II ಮತ್ತು III

(C) II, III ಮತ್ತು IV (D) I, II, III ಮತ್ತು IV

## ಭಾಗ – II

ಈ ಕೆಳಗಿನವುಗಳಲ್ಲಿ ಯಾವುದಾದರೂ **ಐದು** ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ. ಪ್ರತಿಯೊಂದು ಉತ್ತರವು ಅರ್ಧ ಪುಟಕ್ಕೆ ಮೀರದಿರಲಿ : $5 \times 2 = 10$

11. ತಾರುಣ್ಯಾವಸ್ಥೆಯಲ್ಲಿ ಕಂಡುಬರುವ ಸಾಮಾಜಿಕ ವಿಕಾಸವನ್ನು ಸಂಕ್ಷಿಪ್ತವಾಗಿ ವಿವರಿಸಿ.

12. ವೈಗಾಸ್ಕಿರವರ ವಿಕಸನ ಸಮೀಪ ವಲಯ ( ZPD ) ವನ್ನು ವಿವರಿಸಿ.

13. "ಒಂದು ಕುಟುಂಬದಲ್ಲಿ ಮಗ ಮತ್ತು ಮಗಳು ಇಬ್ಬರೂ ಶೈಕ್ಷಣಿಕ ಪ್ರವಾಸಕ್ಕೆ ಹೊರಟಿದ್ದಾರೆ. ಆದರೆ ಪೋಷಕರು ಮಗನನ್ನು ಮಾತ್ರ ಪ್ರವಾಸಕ್ಕೆ ಕಳುಹಿಸುತ್ತಾರೆ". ಈ ಸನ್ನಿವೇಶದಲ್ಲಿ ನೀವುಗಳು ಗಮನಿಸಿದ ಅಂಶಗಳೇನು ? ಹಾಗೂ ನಿಮ್ಮ ಸಲಹೆ ಏನು ? ಎಂಬುದನ್ನು ಉತ್ತರಿಸಿ.

14. ಕಲಿಕೆಯ ನಾಲ್ಕು ಗುಣಲಕ್ಷಣಗಳನ್ನು ಸಂಕ್ಷಿಪ್ತವಾಗಿ ಅರ್ಥೈಸಿ.

15. ಒಳಗೊಳ್ಳುವ ತರಗತಿಯಲ್ಲಿ ನಿಮ್ಮ ವಿದ್ಯಾರ್ಥಿಗಳೊಂದಿಗೆ ರಚನಾತ್ಮಕ ಸಂಬಂಧವನ್ನು ಹೇಗೆ ಕಟ್ಟಿಕೊಳ್ಳಬಲ್ಲಿರಿ ಎಂಬುದನ್ನು ಸ್ಪಷ್ಟಪಡಿಸಿ.

16. ಮೀಸಲಾತಿ ನೀತಿಯ ಯಾವುದಾದರೂ ಎರಡು ಪ್ರಯೋಜನಗಳನ್ನು ವಿವರಿಸಿ.

17. ಸರ್ವ ಶಿಕ್ಷಣ ಅಭಿಯಾನದ ಯಾವುದಾದರೂ ನಾಲ್ಕು ಮುಖ್ಯ ಉದ್ದೇಶಗಳನ್ನು ಪಟ್ಟಿ ಮಾಡಿ.

18. ಪ್ರತಿಭಾನ್ವಿತ ಮಕ್ಕಳನ್ನು ಗುರುತಿಸಲು ನೀವುಗಳು ಬಳಸುವ ಕಾರ್ಯ–ತಂತ್ರಗಳನ್ನು ವಿವರಿಸಿ.

## ಭಾಗ – III

ಈ ಕೆಳಗಿನ ಪ್ರತಿ ಪ್ರಶ್ನೆಗೂ ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಒಂದಕ್ಕೆ ಉತ್ತರಿಸಿ. ಪ್ರತಿ ಉತ್ತರವು ಒಂದು ಪುಟ ಮೀರದಂತಿರಲಿ. ಪ್ರತಿಯೊಂದು ಪ್ರಶ್ನೆಗೆ ಐದು ಅಂಕಗಳು : $8 \times 5 = 40$

19. "ಅತ್ಯುತ್ತಮ ಶಿಕ್ಷಕ ಪ್ರಶಸ್ತಿ" ಪುರಸ್ಕಾರಕ್ಕಾಗಿ ಒಬ್ಬ ವೃತ್ತಿಪರ ಶಿಕ್ಷಕರನ್ನು ಆಯ್ಕೆ ಮಾಡಲು ನೀವುಗಳು ಬಳಸುವ ಮಾನದಂಡಗಳೇನು ?

***ಅಥವಾ***

"ಶಾಲೆ ಮತ್ತು ಸಮುದಾಯ ಒಂದೇ ನಾಣ್ಯದ ಎರಡು ಮುಖಗಳು." ಈ ಹೇಳಿಕೆಯಲ್ಲಿ ಶಾಲೆ ಮತ್ತು ಸಮುದಾಯಗಳ ಪರಸ್ಪರ ಅನ್ಯೋನ್ಯ ಸಂಬಂಧವನ್ನು ಸಮರ್ಥಿಸಿ.

20. ವ್ಯಕ್ತಿಯನ್ನು ಸಾಮಾಜೀಕರಣಗೊಳಿಸುವಲ್ಲಿ ಕುಟುಂಬ ಹಾಗೂ ಶಾಲೆಗಳ ಪಾತ್ರವನ್ನು ವಿವರಿಸಿ.

***ಅಥವಾ***

ಕಲಿಕೆಯನ್ನು ಅನುಕೂಲಿಸುವಲ್ಲಿ ಒಳಗೊಳ್ಳುವ ವಿಧಾನವು ಸಾಂಪ್ರದಾಯಿಕ ವಿಧಾನಕ್ಕಿಂತ ಹೇಗೆ ಭಿನ್ನವಾಗಿದೆ ಎಂಬುದನ್ನು ವಿಷದಪಡಿಸಿ.

21. "ಸದೃಢ ಶಾಲಾಭಿವೃದ್ಧಿ ಹಾಗೂ ಮೇಲುಸ್ತುವಾರಿ ಸಮಿತಿಯಿಂದ ಸದೃಢ ಶಾಲೆಯ ನಿರ್ಮಾಣ ಸಾಧ್ಯ" ಎಂಬುದನ್ನು ನಿಮ್ಮ ಶಾಲಾ ತರಬೇತಿ ಅನುಭವದೊಂದಿಗೆ ಸಮರ್ಥಿಸಿ.

***ಅಥವಾ***

ಪ್ರಸ್ತುತ ದಿನಗಳಲ್ಲಿ ಸಮೂಹ ಮಾಧ್ಯಮಗಳು ಒಂದು ಶಕ್ತಿಶಾಲಿ ಸಾಮಾಜೀಕರಣ ಸಂಸ್ಥೆಗಳಾಗಿವೆ. ವಿಶ್ಲೇಷಿಸಿ.

22. ಬಾಲ್ಯಾವಸ್ಥೆಯಲ್ಲಿ ಕಂಡುಬರುವ ಯಾವುದಾದರೂ ಐದು ಸಹಜ ಗುಣಲಕ್ಷಣಗಳನ್ನು ವಿವರಿಸಿ.

***ಅಥವಾ***

ವ್ಯಕ್ತಿತ್ವದ ವಿಭಿನ್ನ ಬೆಳವಣಿಗೆಯಲ್ಲಿ ಆಟಗಳಿಂದಾಗುವ ಪ್ರಯೋಜನಗಳನ್ನು ವಿವರಿಸಿ.

23. ನಿಮ್ಮ ಆಯ್ಕೆಯ ಕಲಿಕಾಂಶವನ್ನು ಐದು 'E' (5E) ಗಳ ಮೂಲಕ ಕಲಿಕೆಯನ್ನು ಹೇಗೆ ಅನುಕೂಲಿಸುವಿರಿ ಎಂಬುದನ್ನು ಅನ್ವಯಿಸಿ ಬರೆಯಿರಿ.

***ಅಥವಾ***

ನಿಮ್ಮ ರೂಢಿ ಪಾಠಬೋಧನೆಯ ಅನುಭವದ ಆಧಾರದ ಮೇಲೆ ಸಂರಚನಾ ಬೋಧನಾ ತರಗತಿಯ ನಿಹಿತಾರ್ಥಗಳನ್ನು ಬರೆಯಿರಿ.

24. "ಕಲಿಕೆಯನ್ನು ಅನುಕೂಲಿಸುವಲ್ಲಿ ಸಹಪಾಠಿ ಕಲಿಕೆಯು ಶಿಕ್ಷಕ ಕೇಂದ್ರಿತ ಬೋಧನೆಗಿಂತ ಹೆಚ್ಚು ಪರಿಣಾಮಕಾರಿಯಾಗಿರುವುದರಿಂದ ಬಹುವರ್ಗ ಬೋಧನೆಯು ಹೆಚ್ಚು ಅಪೇಕ್ಷಿತವಾಗಿದೆ" ಎಂಬುದನ್ನು ಸಮರ್ಥಿಸಿ.

***ಅಥವಾ***

ಬಹುವರ್ಗ ಬೋಧನಾ ತರಗತಿ ನಿರ್ವಹಣೆ ಮಾಡುವಲ್ಲಿ ಎದುರಾಗಬಹುದಾದ ಸವಾಲುಗಳನ್ನು ಕಾರಣೀಕರಿಸಿ.

25. ಒಳಗೊಳ್ಳುವ ತರಗತಿ ಪಾಠಯೋಜನೆ ಅಭಿವೃದ್ಧಿಪಡಿಸುವ ತತ್ವಗಳನ್ನು ಆಧರಿಸಿ, ನಿಮ್ಮ ತರಗತಿ ಬೋಧನಾ–ಕಲಿಕೆ ಪ್ರಕ್ರಿಯೆಗೆ ಸಂಬಂಧಿಸಿದಂತೆ ಯೋಜಿಸಬಹುದಾದ ಅಂಶಗಳನ್ನು ಕುರಿತು ವಿವರಿಸಿ.

***ಅಥವಾ***

ನಿಮ್ಮ ತರಗತಿಯನ್ನು ವೈವಿಧ್ಯತೆಯ ಒಂದು ಸಂಪನ್ಮೂಲವಾಗಿ ಸೃಷ್ಟಿಸಲು ನಿಮ್ಮ ಕಾರ್ಯ–ತಂತ್ರಗಳನ್ನು ಸೈದ್ಧಾಂತಿಕವಾಗಿ ವಿವರಿಸಿ.

26. ಪ್ರಸ್ತುತ ಶಾಲಾ ಸನ್ನಿವೇಶದಲ್ಲಿ ಒಳಗೊಳ್ಳುವ ತರಗತಿಯನ್ನು ಸೃಷ್ಟಿಸಲು ಇರುವ ಮನೋಭಾವನಾತ್ಮಕ ಅಡೆ–ತಡೆಗಳನ್ನು ವಿಶ್ಲೇಷಿಸಿ.

***ಅಥವಾ***

ನ್ಯೂನತೆಯುಳ್ಳ ವ್ಯಕ್ತಿ ಎಂದರೆ ಯಾರು ? ಒಂದು ಒಳಗೊಳ್ಳುವ ತರಗತಿಯಲ್ಲಿ ನ್ಯೂನ್ಯತೆಯುಳ್ಳ ಮಗುವಿಗೆ ಸಮಾನ ಶಿಕ್ಷಣ ನೀಡುವಾಗ ಶಿಕ್ಷಕರಾಗಿ ನಿಮ್ಮ ಕಾರ್ಯ ಯೋಜನೆಯನ್ನು ವಿವರಿಸಿ.

**( English Version )**

## PART – I

Four choices have been given for each of the following questions. Choose the most appropriate answer and write in the answer-book. All the questions are compulsory. $10 \times 1 = 10$

1. The one who proposed “Education as a process of living through a reconstruction of experiences” is

   (A) Mahatma Gandhi (B) Swami Vivekananda

   (C) John Dewey (D) R. S. Peters.

2. The concept of ‘each child is different’ is as follows :

   (A) Others (B) Countless

   (C) Cordial (D) Unique.

3. The socialization of individual means

   (A) causing social change

   (B) adding factors of socialization on curriculum

   (C) observing traditions, rules and regulations and practices in society

   (D) converting a biological organism into a social being.

4. ‘Threshold to adulthood’ is the characteristic of which stage in the life-span of human beings ?

   (A) Infancy (B) Childhood

   (C) Adolescence (D) Adults.

5. Learning takes place

   I. by listening

   II. by observation

   III. by reading and writing

   IV. by touch.

   (A) I and II (B) III and IV

   (C) I, II and III (D) I, II, III and IV.

6. Which one of the following characteristics is not an appropriate characteristic of critical intelligence ?

   (A) Adjusting to situation

   (B) Thinking abstractly

   (C) Recollecting information

   (D) Possessing language ability.

7. A teacher before entering the classroom starts talking near the door itself and then enters inside. The purpose of the teacher is to facilitate which of the following disabled children ?

   (A) Hearing disabled (B) Visual impaired

   (C) Speaking impaired (D) Dyslexia.

8. 'Education is in concurrent list' means

   (A) Education is under the rules of local government

   (B) Education is under the rules of the State Government

   (C) Education is under the rules of Central Government

   (D) Education is under the rules of Central and State Governments.

9. The assessment test used by teachers in everyday classroom teaching-learning process is

   (A) Achievement test (B) Formative evaluation test

   (C) Summative evaluation test (D) Diagnostic test.

10. The domains in primary education that have been given importance according to NPE 1986 and revised 1992 Education Policy are

    I. Universal enrolment of children between the age group of 6-14 years

    II. Retention of all enrolled children in the school.

    III. Providing yoga education in schools.

    IV. Developing quality education to reach learning levels that need to be attained by all children.

   (A) I, II and IV (B) I, II and III

   (C) II, III and IV (D) I, II, III and IV.

**PART – II**

Answer any *five* of the following questions briefly, each answer not exceeding *half a* page. $5 \times 2 = 10$

11. Briefly explain the social development found in adolescence.
12. Explain the Zone of Proximal Development ( ZPD ) of Vygotsky.
13. "In a family both son and daughter are ready to go for an educational tour. But parents send only the son for this trip." What are the factors that you have observed in this situation ? What is your suggestion ?
14. Briefly explain the four characteristics of learning.
15. Clarify how you construct constructivist relationship with your students in an inclusive classroom.
16. Explain any two advantages of reservation policy.
17. List out any four important objectives of Sarva Shiksha Abhiyan.
18. Explain the techniques that you use to identify gifted children.

**PART – III**

There is an alternate question for each of the following. Answer either of them, each answer not exceeding *one* page. $8 \times 5 = 40$

19. What are the criteria that you would use to select a professional teacher for the 'Best Teacher Award' ?

OR

'School and community are the two faces of the same coin.' Justify the cordial relationship of school and community.

20. Explain the role of family and school in socialization of an individual.

OR

Enumerate how inclusive approach is different from traditional approach in facilitating learning.

21. "It is possible to build a strong school by strong school development and management committee." Justify this with your experience during practice in teaching.

OR

"Mass media is one of the powerful social organization in current days." Analyse and write.

22. Explain any five natural characteristics found in childhood.

OR

Explain the uses of play in the development of different dimensions of personality.

23. How do you facilitate learning points of your choice through five 'E's ? Apply and write.

OR

Write classroom implications of constructivist teaching based on your experience of practice in teaching.

24. Since peer learning is more effective than teacher centred teaching, justify that multigrade teaching is more desirable.

OR

Reason out the challenges that may be encountered during multigrade teaching class management.

25. Based on the principles of developing lesson plan of inclusive classroom, explain the factors that could be planned related to teaching-learning process of your class.

OR

Explain philosophically your technique to create your classroom as a diversity of resources.

26. Analyse the attitudinal barriers that are found in the present school context to create inclusive classroom.

OR

Who is a person with disability ? Explain your programme of plan as a teacher in providing equal education for disabled child in an inclusive classroom.